





ಇತ್ತೀಚೆಗೆ ಧಾರವಾಡದಲ್ಲಿ ನಡೆದ 84 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಚಂದ್ರಶೇಖರ ಕಂಬಾರರ ಮತ್ತು ಧರ್ಮಗುರು ದಲಾಯಿ ಲಾಮಾ ಅವರ ಚುಕ್ಕಿಚಿತ್ರಗಳನ್ನು ಅವರಿಗೆ ಅರ್ಪಿಸಿದ್ದಾರೆ. ಜಿಲ್ಲೆಯ ಮುಖಂಡರಾದ ಉದಾಸಿ ಮತ್ತು ಬೊಮ್ಮಾಯಿಯವರ ಚುಕ್ಕಿಚಿತ್ರಗಳೂ ಅಪ್ರತಿಮವಾಗಿವೆ.

ಇತ್ತೀಚೆಗೆ ನಡೆದ ಚಿತ್ರ ಸಂತೆಯಲ್ಲೂ ಇವರು ಭಾಗವಹಿಸಿ ಚಿತ್ರ ಪ್ರದರ್ಶಿಸಿದ್ದಾರೆ.

ತಿಳವಳ್ಳಿಗೆ ಬಂದ ಯೋಗರಾಜ ಭಟ್ಟರಿಗೂ ವರ್ಣಚಿತ್ರ ಸಮರ್ಪಿಸಿದ್ದಾರೆ. ಇವರು ಶಾಲಾ ಮಕ್ಕಳಲ್ಲೂ ಚಿತ್ರ ಕಲೆಯ ಒಲವು ಮೂಡಿಸಿ, ಹಲವಾರು ಜಿಲ್ಲಾ, ತಾಲೂಕು ಪ್ರಶಸ್ತಿ ಗೆಲ್ಲುವಂತೆ ಮಾಡಿದ್ದಾರೆ. ಇವರ ಕಲೆಗೆ ಶಿಕ್ಷಣ ಇಲಾಖೆ ಬೆಂಬಲವಾಗಿ ನಿಂತರೆ ಮಕ್ಕಳನ್ನು ಚಿತ್ರಕಲೆಯತ್ತ ಸೆಳೆಯುವುದರಲ್ಲಿ ಸಂಶಯವಿಲ್ಲ.



